

ಚಿತ್ರ : ೪೭

ಜ್ಞಾನ, ಚುರುಕಾದ ಭಾಷಣ ಶಕ್ತಿ, ಮತ್ತು ಪ್ರಚಂಡ ಕಾರ್ಯಶಕ್ತಿ" ಎಂದು ಸ್ವಾಮೀಜಿ ತಮ್ಮ ಒಂದು ಪತ್ರದಲ್ಲಿ ಬರೆಯುತ್ತಾರೆ. ಒಟ್ಟಿನಲ್ಲಿ ಸ್ವಾಮೀಜಿಯವರ ತರಗತಿಗಳು ಇಂಗ್ಲಿಷ್ ಸಮಾಜದ ವಿವಿಧ ವರ್ಗಗಳ ಗಮನಾರ್ಹ ಸಂಖ್ಯೆಯ ಜನರನ್ನು ಆಕರ್ಷಿಸಿದವು. ಬಹಳಷ್ಟು ಜನರಿಗೆ ವಿವೇಕಾನಂದರು ಒಬ್ಬ ಸಮರ್ಥ ಗುರು ಎನ್ನುವುದು ಸ್ಪಷ್ಟವಾಯಿತು.

## ಛಾಯಾಚಿತ್ರ ೪೮

ಸ್ವಾಮೀಜಿ ಇಂಗ್ಲೆಂಡ್ ಬಿಡುವ ಮುಂಚೆ ಅವರ ಶಿಷ್ಯೆ ಮಿಸ್ ಎಮ್ಲಿನ್ ಸೌಟರ್ (Miss Emmlen Souter) ಎಂಬಾಕೆ ಒಬ್ಬ ಪರಿಣತ ಛಾಯಾಗ್ರಾಹಕನಾದ ಆಲ್‌ಫ್ರೆಡ್ ಎಲ್ಲಿಸ್ (Alfred Ellis) ಎಂಬುವವನ ಮೂಲಕ ಸ್ಟುಡಿಯೋದಲ್ಲಿ ಸ್ವಾಮೀಜಿಯವರ ಆರು ವಿವಿಧ ಚಿತ್ರಗಳನ್ನು ತೆಗೆಸಿದರು. ಅವುಗಳಲ್ಲಿ ಇದು ಮೊದಲನೆಯದು.

ಧ್ಯಾನಸ್ಥರಾಗಿ ಕುಳಿತಿರುವ ಸ್ವಾಮೀಜಿಯವರ ಈ ಚಿತ್ರವು ವಿಶ್ವಾದ್ಯಂತ ಪ್ರಸಿದ್ಧವಾಗಿದೆ. ರಾಮಕೃಷ್ಣ ಆಶ್ರಮಗಳ ಪೂಜಾ ಮಂದಿರಗಳಲ್ಲಿ ಈ ಚಿತ್ರವು ವಿರಾಜಮಾನವಾಗಿದ್ದು ಪೂಜಿಸಲ್ಪಡುತ್ತಿದೆ. ಈ ಚಿತ್ರದ ಬಗ್ಗೆ ಇನ್ನೊಂದು ಅಭಿಪ್ರಾಯವೂ ಇದೆ. ಲಂಡನ್ನಿನಲ್ಲಿ ಸ್ವಾಮೀಜಿ ರಾಜಯೋಗದ ತರಗತಿಗಳನ್ನು ನಡೆಸುತ್ತಿದ್ದರು. ಆ ಸಮಯದಲ್ಲಿ ಒಮ್ಮೆ ಸಮಾಧಿಸ್ಥರಾದರು. ಆಗ ಈ ಚಿತ್ರವನ್ನು ಸೆರೆಹಿಡಿಯಲಾಯಿತು ಎಂದು ಸ್ವಾಮಿ ಪ್ರಭಾನಂದಜಿ ಅವರು ಹೇಳುತ್ತಾರೆ.

## ಛಾಯಾಚಿತ್ರ ೪೯

ಇದು ಸ್ವಾಮೀಜಿ ಲಂಡನ್ನಿನಲ್ಲಿ ಭಾಷಣ ಮಾಡುವಾಗ



ಚಿತ್ರ : ೪೮

ತೆಗೆದ ಚಿತ್ರ. "ಸ್ವಾಮೀಜಿಯವರದು ಶ್ಯಾಮಲವರ್ಣ, ವಿಶಾಲ ಮತ್ತು ಪ್ರಖರ ನೇತ್ರಗಳು, ಆಕರ್ಷಕ ಮತ್ತು ಮನಮೋಹಕ ಉಡುಗೆ, ಎಲ್ಲಕ್ಕಿಂತ ಮಿಗಿಲಾಗಿ ಅವರದು ಅಪ್ರತಿಮ ವಾಕ್ಪಟುತ್ವ ಮತ್ತು ಸ್ವಯಂಸ್ಫೂರ್ತಿ. ಇದೊಂದು ವಿನೂತನ ನೋಟ, ಮರೆಯಲಾಗದ ಅನುಭವ." ಸ್ವಾಮೀಜಿಯವರ ಬಗ್ಗೆ ಅವರ ಶಿಷ್ಯರಾದ ಎರಿಕ್ ಹ್ಯಾಮಂಡ್ ಮಾಡಿದ ಈ ವರ್ಣನೆ ಈ ಚಿತ್ರಕ್ಕೆ ಬಹಳ ಒಪ್ಪುತ್ತದೆ.



ಚಿತ್ರ : ೪೯



## ಉಪನಿಷನ್ಮಂಜರಿ

**ಉಪನಿಷತ್ತುಗಳು ಮಾನವಜೀವನದ ಬಗ್ಗೆ ಬಹಳ ಆಶಾಭಾವನೆಯನ್ನು ವ್ಯಕ್ತಪಡಿಸುತ್ತವೆ. ಬದುಕು ಸರ್ವಾಂಗ ಸುಂದರವಾಗಬೇಕು, ಅದರಲ್ಲಿ ಜ್ಞಾನದ ಅನ್ವೇಷಣೆಯ ಜೊತೆಜೊತೆಗೆ ಕರ್ಮವನ್ನೂ ತಪ್ಪದೆ ಪಾಲಿಸಬೇಕು ಎಂಬ ಸಮಗ್ರ ಜೀವನ ವಿಧಾನವನ್ನು ಈಶಾವಾಸ್ಯ ಉಪನಿಷತ್ತು ಬೋಧಿಸುತ್ತದೆ. ಇದರ ಸಂಕ್ಷಿಪ್ತ ಪಕ್ಷಿನೋಟವನ್ನು ನಮಗೆ ಮಾಡಿಕೊಟ್ಟಿರುವ ಲೇಖಕರು ಬಿ.ಎಸ್.ಎನ್.ಎಲ್. ಸಂಸ್ಥೆಯ ನಿವೃತ್ತ ಅಧಿಕಾರಿಗಳು. ಸಂಸ್ಕೃತ ಸಾಹಿತ್ಯದಲ್ಲಿ ಆಸಕ್ತಿ ಹೊಂದಿರುವ ಇವರು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರು; ವಿವೇಕಪ್ರಭ ಪತ್ರಿಕೆಯ ಉತ್ಸಾಹಿ ಕಾರ್ಯಕರ್ತರು.**

# ಈಶಾವಾಸ್ಯ ಉಪನಿಷತ್ತಿನ ಒಂದು ಪಕ್ಷಿನೋಟ

**ವಿ. ಲಕ್ಷ್ಮೀಶ್**

ಜೀವ, ಜಗತ್ತು, ಈಶ್ವರ – ಈ ಮೂರು ತತ್ತ್ವಗಳ ಸ್ವರೂಪ ಸ್ವಭಾವ ಸಂಬಂಧಗಳನ್ನು ಉಪನಿಷತ್ತುಗಳು ತಿಳಿಸುತ್ತವೆ. ಇವುಗಳ ಸರಿಯಾದ ತಿಳಿವಳಿಕೆ ಇಲ್ಲದೆ ಇರುವುದರಿಂದಲೇ ಸುಖ ದುಃಖ, ಮಾನ ಅಪಮಾನ, ಕೀರ್ತಿ ಅಪಕೀರ್ತಿ ಮೊದಲಾದ ದ್ವಂದ್ವಗಳ ಹೊಡೆತಕ್ಕೆ ಸಿಲುಕಿ ಮಾನವ ನಲುಗಿಹೋಗುತ್ತಿದ್ದಾನೆ. ಅಧ್ಯಾತ್ಮಜ್ಞಾನದಿಂದ ಆತ್ಮನ ಸ್ವರೂಪಬೋಧೆಯಾಗುತ್ತದೆ. ಆಗ ಸಾಧಕನು ತನ್ನತನವನ್ನು, ತನಗೂ ಈ ಜಗತ್ತಿಗೂ ಇರುವ ಸಂಬಂಧವನ್ನೂ ಅರಿತು ಹುಟ್ಟು ಸಾವುಗಳ ಚಕ್ರದಿಂದ ಮುಕ್ತನಾಗಬಲ್ಲ. ಸ್ವಾಮಿ ಹರ್ಷಾನಂದಜಿಯವರು **'ಉಪನಿಷತ್'** ಶಬ್ದಕ್ಕೆ ಸೊಗಸಾಗಿ ವ್ಯಾಖ್ಯಾನ ಮಾಡಿದ್ದಾರೆ. ಸಂಸಾರವೆಂಬ ಮರುಭೂಮಿಯಲ್ಲಿ ಬೆಂದಜೀವಕ್ಕೆ **'ಉ'**ದಕ ಅಂದರೆ ನೀರಿನಂತೆ, ಚೆನ್ನಾಗಿ ಬೇರೂರಿರುವ ಸಂಸಾರವೆಂಬ ಅಶ್ವತ್ಥಮರಕ್ಕೆ **'ಪ'**ರಶು ಅಥವಾ ಕೊಡಲಿಯಂತೆ, ಜನನ ಮರಣಗಳ ಹಾದಿಯಲ್ಲಿ ನಡೆದು ನಡೆದು ಬಳಲಿರುವ ಜೀವಿಗೆ ಆಸರೆಯ **'ನಿ'**ಲಯ ಅಥವಾ ಶಾಶ್ವತ ಮನೆಯಂತೆ; ಇದು ಜೀವಿಯ ಭವಬೀಜವನ್ನು **'ಸಾದ'**ಯತಿ ಅಂದರೆ ನಾಶ ಮಾಡುವಂತಹುದು ಎಂದು ಮಾರ್ಮಿಕವಾಗಿ ವಿವರಿಸಿದ್ದಾರೆ.

ಇಂತಹ ಉಪನಿಷತ್ತುಗಳಲ್ಲಿ ಈಶಾವಾಸ್ಯ ಉಪನಿಷತ್ತೂ ಒಂದು. ಇದು ಶುಕ್ಲ ಯಜುರ್ವೇದದ ವಾಜಸನೇಯ ಮಂತ್ರಶಾಖೆಗೆ ಸೇರಿದೆ. ಆದ್ದರಿಂದ ಇದನ್ನು 'ವಾಜಸನೇಯ ಉಪನಿಷತ್ತು' ಎಂದೂ, ಸಂಹಿತಾಭಾಗದಲ್ಲಿ ಬಂದಿರುವುದರಿಂದ 'ಸಂಹಿತೋಪನಿಷತ್ತು' ಎಂದೂ, 'ಈಶಾವಾಸ್ಯಮಿದಂ' ಎಂದು ಆರಂಭವಾಗುವುದರಿಂದ 'ಈಶಾವಾಸ್ಯ ಉಪನಿಷತ್' ಎಂದೂ ಕರೆಯುತ್ತಾರೆ. ಇದು ಕೇವಲ ಹದಿನೆಂಟೇ ಮಂತ್ರಗಳುಳ್ಳ ಅತ್ಯಂತ ಪುಟ್ಟ ಉಪನಿಷತ್ತು.

ಈ ಪ್ರಪಂಚವು ಹೊರ ಇಂದ್ರಿಯಗಳಿಗೆ ಹಾಗೂ ಒಳ ಇಂದ್ರಿಯಗಳಿಗೆ ಏನೇನಾಗಿ ಯಾವ ಯಾವ ನಾಮ (ಹೆಸರು) ರೂಪ ಭಾವಗಳಿಂದ ಅನುಭವಕ್ಕೆ ಬರುತ್ತಿದೆಯೋ, ಕಾಣುತ್ತಿದೆಯೋ ಅದೆಲ್ಲದರಲ್ಲೂ ಪರಾತ್ಪರನಾದ ಪರತತ್ತ್ವವಾದ ಭಗವಂತನೇ ಇದ್ದಾನೆ. **ಈಶಾವಾಸ್ಯಮಿದಂ ಸರ್ವಂ** – 'ಈಶ' ಈ ಎಲ್ಲದರಲ್ಲೂ ವಾಸಿಸುತ್ತಿದ್ದಾನೆ, ಈ ಎಲ್ಲವನ್ನೂ ಅವನಿಂದ ಆವರಿಸಿಬಿಡು. ಇದೆಲ್ಲವೂ ಅವನೇ ಹಾಗೂ ಅವನದೇ. ಆದುದರಿಂದ ಅವನಿಂದ ದೊರೆತುದೆಲ್ಲವನ್ನೂ ಅವನಿಗಾಗಿ, ಅವನಿಗರ್ಪಿತವನ್ನಾಗಿ ಮಾಡಿ ಅನುಭವಿಸು, ರಕ್ಷಿಸು. **'ಮಾ ಗೃಧಃ ಕಸ್ಯಸ್ವಿದ್ಧನಂ'** – ಇತರರ ವಸ್ತುವಿಗಾಗಿ ಹಂಬಲಿಸಬೇಡ. ಹೀಗೆ ಮೊದಲ ಮಂತ್ರವು ಈಶ್ವರನಿಗೂ ಈ ಜಗತ್ತಿಗೂ ಜೀವಿಗೂ ಇರುವ ಸಂಬಂಧವನ್ನು ಸರಳವಾಗಿ ಸ್ಪಷ್ಟಪಡಿಸುತ್ತದೆ.

**'ಕುರ್ವನ್ನೇವೇಹ ಕರ್ಮಾಣಿ'** – ಭಗವಂತನನ್ನು ಎಲ್ಲರಲ್ಲೂ, ಎಲ್ಲದರಲ್ಲೂ ಕಾಣುತ್ತ ಭಗವಂತನಿಂದ ಪಡೆದುದನ್ನು ಭಗವಂತನಿಗೇ ಅರ್ಪಿಸುತ್ತಾ ನಮ್ಮ ನಮ್ಮ ಪಾಲಿನ ಕರ್ತವ್ಯಗಳನ್ನು ಪ್ರೀತಿ ಶ್ರದ್ಧೆ ನಿಷ್ಠೆ ಪ್ರಾಮಾಣಿಕತೆಗಳಿಂದ ನಿರ್ವಹಿಸುತ್ತಾ, ನೂರು ವರ್ಷ ಕಾಲ ಬದುಕಬೇಕು. ಬದುಕುವುದೇ ಕರ್ತವ್ಯ. ಬದುಕಬೇಕು, "ಈಸಬೇಕು ಇದ್ದು ಜಯಿಸಬೇಕು." ಇದರ ಹೊರತು ಈ ಜನ್ಮ-ಮರಣ ಚಕ್ರದಿಂದ ಬಿಡಿಸಿಕೊಳ್ಳಲು ಬೇರೆ ಯಾವ ಉಪಾಯವೂ ಇಲ್ಲ. ಹಾಗಲ್ಲದೆ, ಕೇವಲ ದೇಹ ಪ್ರಾಣಗಳ ನೆಲೆಯಲ್ಲಿ ನಿಂತು, ನಾನು ನನ್ನದೆಂಬ ಅಭಿಮಾನದಿಂದ ಕರ್ಮ ಮಾಡುವವನು ಮತ್ತೆ ಮತ್ತೆ ಈ ಅಜ್ಞಾನದ ಬಲೆಯಲ್ಲಿ ಸಿಕ್ಕಿಹಾಕಿಕೊಳ್ಳಲೇಬೇಕು.

ಹಾಗಾದರೆ ಯಾವುದನ್ನು ತಿಳಿದುಕೊಳ್ಳಬೇಕೋ ಆ ಪರತತ್ತ್ವದ ಸ್ವರೂಪವೇನು? ಅದನ್ನು ನಾಲ್ಕು ಮತ್ತು ಐದನೆಯ ಮಂತ್ರಗಳು ತಿಳಿಸುತ್ತವೆ. ಅದು ಚಲಿಸದೆ ಇದ್ದರೂ ಮನಸ್ಸನ್ನೂ

ಮೀರಿದ ವೇಗವನ್ನು ಹೊಂದಿದೆ. 'ಒಂದೇ ಆದ ಇದು ಅನೇಕಗಳ ಹಿಂದೆ ಇದೆ, ಅನೇಕಕ್ಕೆ ಆಧಾರವಾಗಿ ಇದೆ. ಅದು ಹತ್ತಿರದಲ್ಲಿದೆ, ದೂರದಲ್ಲಿದೆ, ಅದು ಎಲ್ಲದರ ಒಳಗೂ ಇದೆ, ಹೊರಗೂ ಇದೆ. ಈ ಸರ್ವವ್ಯಾಪಕ ತತ್ತ್ವವನ್ನು ಅರಿತವನು ಎಲ್ಲ ಜೀವಿಗಳನ್ನು ತನ್ನೊಳಗೂ, ಅವುಗಳಲ್ಲಿ ತನ್ನನ್ನೂ ಕಾಣುತ್ತಾನೆ. ಆಗ ಅವನಿಗೆ ಯಾವುದನ್ನು ಕಂಡರೂ ಜುಗುಪ್ಸೆಯುಂಟಾಗುವುದಿಲ್ಲ. ಅತ್ಯಂತ ಮಲಿನವಾದ ಕೆಟ್ಟ ವಾಸನೆಯ ಮೋರಿಯ ನೀರು, ಎಲ್ಲರ ಪಾಪ ತೊಳೆವ ಪರಮಪಾವನವಾದ ಗಂಗೆಯ ನೀರು ಅವನಿಗೆ ಸಮಾನವಾಗಿಯೇ ಭಾಸವಾಗುತ್ತವೆ. **ತತ್ರ ಕೋ ಮೋಹಃ ಕಃ ಶೋಕಃ ಏಕತ್ವಮನುಪಶ್ಯತಃ** – ಆಗ ಅವನಿಗೆ ತಾನು ತನ್ನದು ಎಂಬ ಮೋಹವಾಗಲಿ, ಅವುಗಳ ಇಲ್ಲದಿರುವಿಕೆಯಿಂದ ಹುಟ್ಟುವ ಶೋಕವಾಗಲಿ ಉಂಟಾಗುವುದೇ ಇಲ್ಲ! ಈ ಎರಡು ಭಾವಗಳು ತಾನೇ ಜೀವಿಯನ್ನು ಸಂಸಾರವೃಕ್ಷಕ್ಕೆ ಬಲವಾಗಿ ಕಟ್ಟಿಹಾಕುವುದು! ಸರ್ವವ್ಯಾಪಿಯಾದ ಈ ಪರತತ್ತ್ವ ಪರಂಜ್ಯೋತಿ ರೂಪವಾದುದು. ಇದಕ್ಕೆ ನರನಾಡಿಗಳಿರುವ ಶರೀರವಿಲ್ಲ. ಇದು ನಿತ್ಯನಿರಂಜನವಾದುದು. ಇದು ಭೂತ ವರ್ತಮಾನ ಭವಿಷ್ಯತ್ತು ಎಲ್ಲವನ್ನೂ ನೋಡಬಲ್ಲ ಕವಿ (ಕ್ರಾಂತದರ್ಶಿ). 'ಸ್ವಯಂಭೂ' ಅಂದರೆ ಅವನಿಗೆ ಅವನೇ ಕಾರಣ. ಇವನು ಈ ವಿಶ್ವವನ್ನು ನಿಯಮನ ಮಾಡುತ್ತಿರುವವನು. ಎಲ್ಲರನ್ನೂ ಯಥಾನುರೂಪವಾಗಿ ಅವರವರ ಕರ್ಮಾನುಸಾರವಾಗಿ ಅವರವರ ಕರ್ತವ್ಯವನ್ನು ನಿರ್ವಹಿಸುವಂತೆ ವ್ಯವಸ್ಥೆ ಮಾಡುತ್ತಿರುವವನು. ಈ ರೀತಿ ಸಮಸ್ತ ವಿಶ್ವವೂ ಒಂದು ನಿಯಮಕ್ಕೆ ಬದ್ಧವಾಗಿ, ಕಾಲಕಾಲಕ್ಕೆ ಅನುಗುಣವಾಗಿ ಚಲಿಸುತ್ತಿರುವುದೂ, ಘಟಿಸುತ್ತಿರುವುದೂ, ನಿರಂತರವಾಗಿ ನಡೆಯುತ್ತಿರುವುದೂ ಈ ಪರತತ್ತ್ವದ ಪ್ರಭಾವದಿಂದಲೇ. ಸೂರ್ಯ ಚಂದ್ರ ನಕ್ಷತ್ರ ನೀರು ಬೆಂಕಿ ಗಾಳಿ ಮಿಂಚು ಇತ್ಯಾದಿಗಳೆಲ್ಲವೂ ಆ ನಿಯಮಕ್ಕೆ ಬದ್ಧವಾಗಿಯೇ ಕ್ರಿಯಾಶೀಲವಾಗಿವೆ.



ಮುಂದಿನ ಆರು ಶ್ಲೋಕಗಳು ಕರ್ಮ–ಜ್ಞಾನ; ಲೌಕಿಕ–ಪಾರಲೌಕಿಕ; ಅಂತರಂಗ–ಬಹಿರಂಗ ಇವೆಲ್ಲವೂ ಒಂದೇ ಪೂರ್ಣದ ಆವಿರ್ಭಾವಗಳು ಎಂದು ಹೇಳುತ್ತವೆ. ಅವುಗಳಲ್ಲಿ ಒಂದು ಭಾಗ ಮಾತ್ರವೇ ಆ ಪರತತ್ತ್ವದ ನೆಲೆಗೆ ಕೊಂಡೊಯ್ಯಲಾರದು. ಆದುದರಿಂದಲೇ **'ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾ ಅಮೃತಮಶ್ನುತೇ'** – ಲೌಕಿಕ ವಿದ್ಯೆ ಮತ್ತು ಅಗ್ನಿಹೋತ್ರ ಮೊದಲಾದ ಕರ್ಮಗಳ ಆಚರಣೆಗಳ ಮೂಲಕ ಈ ಮೃತ್ಯುಲೋಕವನ್ನು ದಾಟಿ, ಅದರಿಂದ ದೊರಕುವ ಚಿತ್ತಶುದ್ಧಿಯಿಂದ ಪರಜ್ಞಾನವನ್ನು ಪಡೆಯಬೇಕು. ಈ ಪ್ರಕಾರ ಅಮೃತತ್ವವನ್ನು ಪಡೆದು ಜೀವಿ 'ಪೂರ್ಣ'ನಾಗುವನು ಎಂದು ಈ ಉಪನಿಷತ್ತು ಬೋಧಿಸುತ್ತದೆ. ಜೀವಿಯ ಪರಿಪೂರ್ಣತೆಗೆ ಈ ಎರಡೂ ಅರ್ಧವೃತ್ತಗಳ ಜೋಡಣೆ, ಹೊಂದಾಣಿಕೆ ಬೇಕೇಬೇಕು. ಅಂತೆಯೇ **ಸಂಭೂತಿ** (ಕಾರ್ಯರೂಪವಾಗಿ ವಿಶ್ವಾತ್ಮಕವಾಗಿ ವಿಕಾಸಗೊಂಡಿರುವ ಪರತತ್ತ್ವ) ಮತ್ತು ಅವ್ಯಕ್ತವಾಗಿ ಪರಿಪೂರ್ಣವಾಗಿಯೇ ಇರುವ **ಅಸಂಭೂತಿ** (ನಿರಪೇಕ್ಷ ಪರತತ್ತ್ವ) – ಇವೆರಡರ ಅರಿವೂ ಅಮೃತತ್ವಕ್ಕೆ ಅಂದರೆ ಜೀವಿಯ ಜನನ ಮರಣ ಚಕ್ರನಾಶಕ್ಕೆ ಸಾಧಕ ಎಂದು ಈ ಉಪನಿಷತ್ತು ಸ್ಪಷ್ಟಪಡಿಸುತ್ತದೆ.

ಆದುದರಿಂದಲೇ ಸ್ವಾಮಿ ಆದಿದೇವಾನಂದರು, ನಿತ್ಯ ಕರ್ಮ– ಬ್ರಹ್ಮವಿದ್ಯೆಗಳಲ್ಲಿ ಯಾವ ಭೇದವನ್ನೂ ಕಲ್ಪಿಸದೆ ಸಮನಾಗಿ ಅನುಷ್ಠಾನ ಮಾಡುವುದೇ ಈ ಉಪನಿಷತ್ತಿನ ವಿಶೇಷ ಉಪದೇಶವೆಂದು ಹೇಳುತ್ತಾರೆ.

ಆದರೆ ಅದರ ಮರ್ಮವನ್ನರಿತು ಬಾಳುವುದು ಎಷ್ಟು ಕಷ್ಟ! "ಹೇ ಪೂಷನ್ (ಎಲ್ಲವನ್ನು ಪೋಷಿಸುವ ಅಧಿದೇವತೆಯೇ), ಈ ರಹಸ್ಯವನ್ನು ಬಿಚ್ಚಿಡು; ಸತ್ಯಬ್ರಹ್ಮವನ್ನು ಕಾಣಲು ಅನುಗ್ರಹ ತೋರು" ಎಂದು ಕೊನೆಯಲ್ಲಿ ಮಂತ್ರದ್ರಷ್ಟನಾದ ಋಷಿಯು ಪರತತ್ತ್ವವನ್ನು ಬೇಡುತ್ತಾನೆ; **ಯತ್ತೇ ರೂಪಂ ಕಲ್ಯಾಣತಮಂ ತತ್ತೇ ಪಶ್ಯಾಮಿ** – "ನಿನ್ನ ಮಂಗಳಮಯವಾದ ರೂಪವನ್ನು ನಾನು ಕಾಣುವಂತೆ ಅನುಗ್ರಹಿಸು" ಎಂದು ಪ್ರಾರ್ಥಿಸುತ್ತಾನೆ.

"ಗಾಳಿ ತೇಜಸ್ಸು ಅಮೃತಗಳಿಂದ ಕೂಡಿ ಸುಟ್ಟುಹೋಗುವ ಈ ಶರೀರ 'ತತ್ತ್ವ' ಕೂಡ 'ಪರತತ್ತ್ವ'ವೇ ಆಗಿದೆ ಎಂದು ನೆನೆ.